**All India Radio: Bangalore**
**National Bulletin In Kannada**
**07.01.2026 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**07.01.2026 1.10 p.m.**
**<><><><>**

ಮುಖ್ಯಾಂಶಗಳು

1. ದಶಕಗಳಿಂದ ಭಯೋತ್ಪಾದನಾ ತರಬೇತಿ ಶಿಬಿರಗಳನ್ನು ಪಾಕಿಸ್ತಾನ ನಡೆಸುತ್ತಿದೆ- ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್
2. ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಇದೇ ೧೨ ರಂದು ಇಸ್ರೋದ ಭೂವೀಕ್ಷಣಾ ಉಪಗ್ರಹ ಇಒಎಸ್-ಎನ್೧ ಉಡಾವಣೆ
3. ವೆನಿಜುವೆಲಾದಲ್ಲಿ ನಡೆದ ಅಮೆರಿಕ ಮಿಲಿಟರಿ ಕಾರ್ಯಾಚರಣೆಯಲ್ಲಿ ಒಟ್ಟು ೫೬ ಮಂದಿ ಸಾವು
4. ಮಲೇಷಿಯಾ ಓಪನ್ ಸೂಪರ್ ಬ್ಯಾಡ್ಮಿಂಟನ್: ಎರಡನೇ ಸುತ್ತಿಗೆ ಭಾರತದ ಪಿ.ವಿ.ಸಿಂಧು ಮುನ್ನಡೆ

<><><><>

ದೇಶದಲ್ಲಿ ಭಯೋತ್ಪಾದನೆಯನ್ನು ಬೆಂಬಲಿಸುವ ಪ್ರಯತ್ನವಾಗಿ ಪಾಕಿಸ್ತಾನ ದಶಕಗಳಿಂದ ಭಯೋತ್ಪಾದನಾ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ ಎಂದು ಭಾರತ ಆರೋಪಿಸಿದೆ. ಲಕ್ಸೆಂಬರ್ಗ್‌ನಲ್ಲಿ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಈ ವಿಷಯ ತಿಳಿಸಿದ್ದಾರೆ. ಇಂದಿನ ಜಗತ್ತಿನಲ್ಲಿ, ಕೆಲವು ದೇಶಗಳು ತಮಗೆ ಲಾಭವಾಗುವ ಕಡೆ ಮಾತ್ರ ಕಾರ್ಯನಿರ್ವಹಿಸುತ್ತವೆ. ಆದರೆ ಭಾರತಕ್ಕೆ ಉಚಿತ ಸಲಹೆಯನ್ನು ನೀಡುತ್ತವೆ ಎಂದು ಅವರು ದೂರಿದರು. ಆಪರೇಷನ್ ಸಿಂದೂರ ಸಮಯದಲ್ಲಿಯೂ ಇದೇ ರೀತಿಯ ಪರಿಸ್ಥಿತಿ ಸಂಭವಿಸಿದೆ. ಆದರೆ ಆ ದೇಶ ತಮ್ಮದೇ ಪ್ರದೇಶದ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತವೆ ಎಂದು ಸಚಿವ ಡಾ.ಎಸ್.ಜೈಶಂಕರ್ ಹೇಳಿದರು.

**ಧ್ವನಿ: ಜೈಶಂಕರ್ (೧೬ ಸೆಕೆಂಡ್‌ಗಳು)**

ಇನ್ನೊಂದೆಡೆ, ಭಾರತ, ಐರೋಪ್ಯ ರಾಷ್ಟ್ರಗಳೊಂದಿಗಿನ ಸಂಬಂಧವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದೆ ಎಂದು ಅವರು ಆಶಿಸಿದರು, ಈ ವರ್ಷ ಲಕ್ಸೆಂಬರ್ಗ್‌ನಿಂದ ಭಾರತಕ್ಕೆ ಇನ್ನೂ ಅನೇಕ ಸಚಿವರ ಭೇಟಿಗಳು ಮತ್ತು ಮಹತ್ವದ ವ್ಯಾಪಾರ ನಿಯೋಗ ಬರಲಿದೆ ಎಂದು ಸಚಿವರು ಹೇಳಿದರು.

<><><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ, ಇದೇ ೧೨ ರಂದು ಪಿಎಸ್‌ಎಲ್‌ವಿ-ಸಿ೬೨ ರಾಕೆಟ್ ಉಡಾವಣೆ ಮಾಡಲಿದೆ. ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಬೆಳಗ್ಗೆ ೧೦ ಗಂಟೆ ೧೭ ನಿಮಿಷಕ್ಕೆ ಉಪಗ್ರಹ ಉಡಾವಣೆ ಮಾಡಲಾಗುವುದು ಎಂದು ಇಸ್ರೋ ತಿಳಿಸಿದೆ. ಈ ಕಾರ್ಯಾಚರಣೆಯ ಪ್ರಾಥಮಿಕ ಪೇಲೋಡ್ ಭೂ ವೀಕ್ಷಣಾ ಉಪಗ್ರಹ ಇಒಎಸ್-ಎನ್೧, ಇದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಕಾರ್ಯತಂತ್ರದ ಉದ್ದೇಶಗಳಿಗಾಗಿ ಅಭಿವೃದ್ಧಿಪಡಿಸಿದ ಇಮೇಜಿಂಗ್ ಉಪಗ್ರಹವಾಗಿದೆ. ಈ ಯೋಜನೆಯಡಿ ವಿವಿಧ ಭಾರತೀಯ ಮತ್ತು ಅಂತಾರಾಷ್ಟ್ರೀಯ ಬಳಕೆದಾರ ೧೮ ಉಪಗ್ರಹಗಳನ್ನು ಸಹ ರಾಕೆಟ್ ಹೊತ್ತೊಯ್ಯುತ್ತದೆ.

<><><><>

ಕಳೆದ ವಾರಾಂತ್ಯದಲ್ಲಿ ಕ್ಯಾರಕಾಸ್‌ನಲ್ಲಿ ನಡೆದ ಅಮೆರಿಕದ ಮಿಲಿಟರಿ ಕಾರ್ಯಾಚರಣೆಯ ನಂತರ ವೆನೆಜುವೆಲಾದ ಹಂಗಾಮಿ ಅಧ್ಯಕ್ಷ ಡೆಲ್ಸಿ ರೊಡ್ರಿಗಸ್ ಏಳು ದಿನಗಳ ರಾಷ್ಟ್ರೀಯ ಶೋಕಾಚರಣೆ ಘೋಷಿಸಿದ್ದಾರೆ. ಕಾರ್ಯಾಚರಣೆಯ ಸಮಯದಲ್ಲಿ ಕನಿಷ್ಠ ೫೬ ಜನರು ಮೃತಪಟ್ಟಿರುವುದಾಗಿ ವೆನೆಜುವೆಲಾ ಸರ್ಕಾರ ದೃಢಪಡಿಸಿದೆ. ಇದರಲ್ಲಿ ಕ್ಯೂಬಾದ ೩೨ ಮಿಲಿಟರಿ ಮತ್ತು ಪೊಲೀಸ್ ಸಿಬ್ಬಂದಿ ಸೇರಿದ್ದಾರೆ. ವೆನೆಜುವೆಲಾ ಶಾಂತಿಯುತ ದೇಶವಾಗಿದ್ದು, ಯುದ್ಧ ಬೆಂಬಲಿತ ದೇಶವಿಲ್ಲ. ಆದರೆ ಕಾರ್ಯಾಚರಣೆಯಲ್ಲಿ ಆಕ್ರಮಣಕಾರಿ ದಾಳಿಗೆ ಒಳಗಾಗಿದೆ. ವೆನೆಜುವೆಲಾದ ಅಧಿಕಾರಿಗಳು, ದೇಶದ ವ್ಯವಹಾರಗಳ ಉಸ್ತುವಾರಿ ವಹಿಸಿಕೊಂಡಿದ್ದಾರೆ ಎಂದು ಡೆಲ್ಸಿ ರೊಡ್ರಿಗಸ್ ತಿಳಿಸಿದ್ದಾರೆ.

<><><><>

ಪ್ರಧಾನ ಮಂತ್ರಿಯವರ ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನಕ್ಕಾಗಿ ಪ್ರಮುಖ ವೇದಿಕೆಯಾದ ಪ್ರಗತಿ, ೨೦೧೫ ರಲ್ಲಿ ಪ್ರಾರಂಭವಾದಾಗಿನಿಂದ ಒಂದು ಮಹತ್ವದ ಮೈಲಿಗಲ್ಲನ್ನು ಗುರುತಿಸಿದೆ. ಪ್ರಗತಿಯು ಪ್ರಮುಖ ಮೂಲಸೌಕರ್ಯ ಯೋಜನೆಗಳು ಮತ್ತು ಸಾರ್ವಜನಿಕ

ಕುಂದುಕೊರತೆಗಳ ನೈಜ-ಸಮಯದ ಮೇಲ್ವಿಚಾರಣೆ ಮತ್ತು ಪರಿಹಾರವನ್ನು ಸಕ್ರಿಯಗೊಳಿಸುವ ಮೂಲಕ ಆಡಳಿತವನ್ನು ಪರಿವರ್ತಿಸಿದೆ. ಕೇಂದ್ರ, ರಾಜ್ಯಗಳು ಮತ್ತು ಕೇಂದ್ರ ಸಚಿವಾಲಯಗಳನ್ನು ಒಂದೇ ಡಿಜಿಟಲ್ ಇಂಟರ್ಫೇಸ್‌ನಲ್ಲಿ ಒಟ್ಟುಗೂಡಿಸುತ್ತದೆ. ಹಿಮಾಚಲ ಪ್ರದೇಶದ ಪರ್ಬತಿ-೨೨ ಜಲವಿದ್ಯುತ್ ಯೋಜನೆಯು ಪ್ರಗತಿಯ ಉದಾಹರಣೆಗಳಲ್ಲಿ ಒಂದಾಗಿದೆ. ಪರ್ಬತಿ-೨೨ ಜಲವಿದ್ಯುತ್ ಯೋಜನೆಯು ಹಿಮಾಚಲ ಪ್ರದೇಶದ ಕುಲು ಜಿಲ್ಲೆಯ ಪರ್ಬತಿ ನದಿಯಲ್ಲಿ ಎನ್‌ಹೆಚ್‌ಪಿಸಿ ಲಿಮಿಟೆಡ್ ಅಭಿವೃದ್ಧಿಪಡಿಸಿದ ನದಿಯಿಂದ ನಡೆಸಲ್ಪಡುವ ಜಲವಿದ್ಯುತ್ ಕೇಂದ್ರವಾಗಿದೆ. ಈ ಯೋಜನೆಯು ಭಾರತದ ಅತ್ಯಂತ ತಾಂತ್ರಿಕವಾಗಿ ಸಂಕೀರ್ಣ ಮತ್ತು ಕಾರ್ಯತಂತ್ರದ ಮಹತ್ವದ ಜಲವಿದ್ಯುತ್ ಅಭಿವೃದ್ಧಿಗಳಲ್ಲಿ ಒಂದಾಗಿದೆ. ಪರ್ಬತಿ-೨೨ ಅನ್ನು ವಾರ್ಷಿಕವಾಗಿ ಸುಮಾರು ೩ ಸಾವಿರದ ೭೪ ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲು ವಿನ್ಯಾಸಗೊಳಿಸಲಾಗಿದೆ. ಇದು ಉತ್ತರ ಗ್ರಿಡ್‌ಗೆ ವಿಶ್ವಾಸಾರ್ಹ ನವೀಕರಿಸಬಹುದಾದ ಶಕ್ತಿಯನ್ನು ಪೂರೈಸುತ್ತದೆ ಮತ್ತು ವಿವಿಧ ರಾಜ್ಯಗಳಿಗೆ ಪ್ರಯೋಜನವನ್ನು ನೀಡುತ್ತದೆ. ಈ ರಾಜ್ಯಗಳಲ್ಲಿ ಹಿಮಾಚಲ ಪ್ರದೇಶ, ದೆಹಲಿ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶ, ಉತ್ತರಾಖಂಡ್, ಪಶ್ಚಿಮ ಬಂಗಾಳ, ಛತ್ತೀಸ್‌ಗಢ ಮತ್ತು ಚಂಡೀಗಢ ಕೇಂದ್ರಾಡಳಿತ ಪ್ರದೇಶ ಸೇರಿವೆ.

<><><><>

ದೇಶದಲ್ಲಿ ಒಟ್ಟು ೫೦ ಸಾವಿರ ಆರೋಗ್ಯ ಸೌಲಭ್ಯಗಳು ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡಗಳ-ಎನ್‌ಕ್ಯುಎಎಸ್ ಪ್ರಮಾಣೀಕರಣವನ್ನು ಪಡೆದಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಮಹತ್ವದ ಸಾಧನೆಯು, ಗುಣಮಟ್ಟ, ಸುರಕ್ಷತೆ ಮತ್ತು ರೋಗಿ ಕೇಂದ್ರಿತ ಆರೈಕೆಗೆ ರಾಷ್ಟ್ರೀಯ ಬದ್ಧತೆಯನ್ನು ಬಲಪಡಿಸುತ್ತದೆ. ಇದು ಭಾರತವನ್ನು ಎಲ್ಲರಿಗೂ ಸಮಾನ ಮತ್ತು ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗೆ ಹತ್ತಿರ ತರುತ್ತದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಸಾರ್ವಜನಿಕ ಆರೋಗ್ಯ ಸೌಲಭ್ಯಗಳಿಗೆ ನಿರ್ದಿಷ್ಟ ಅವಶ್ಯಕತೆಗಳನ್ನು ಹಾಗೂ ಜಾಗತಿಕ ಅತ್ಯುತ್ತಮ ಅಭ್ಯಾಸಗಳನ್ನು ಗಮನದಲ್ಲಿಟ್ಟುಕೊಂಡು ಎನ್‌ಕ್ಯೂಎಎಸ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಒದಗಿಸಲಾದ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವ ಮತ್ತು ಹೆಚ್ಚಿಸುವ ಗುರಿಯನ್ನು ಹೊಂದಿರುವ

ಸಚಿವಾಲಯ, ೨೦೨೪ ರ ಜೂನ್‌ನಲ್ಲಿ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡಗಳನ್ನು ಜಾರಿಗೆ ತಂದಿದೆ.

<><><>

ಗೋವಾದಲ್ಲಿ ಭಾರತೀಯ ಕರಾವಳಿ ರಕ್ಷಣಾ ಹಡಗು-ಐಸಿಜಿಎಸ್ ಸಮುದ್ರ ಪ್ರತಾಪ್ ಕಾರ್ಯಾರಂಭ ಮಾಡಿದ್ದನ್ನು ಪ್ರಧಾನಿ ನರೇಂದ್ರ ಮೋದಿ ಇಂದು ಶ್ಲಾಘಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿ, ಈ ಹಡಗು ದೇಶದ ಸ್ವಾವಲಂಬನೆಯ ದೃಷ್ಟಿಕೋನಕ್ಕೆ ಬಲ ನೀಡುತ್ತದೆ. ರಾಷ್ಟ್ರದ ಭದ್ರತಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಹಾಗೂ ಸುಸ್ಥಿರತೆಗೆ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿದ್ದಾರೆ.

<><><>

ದೇಶದ ವಿವಿಧ ಭಾಗಗಳಲ್ಲಿ ದಟ್ಟವಾದ ಮಂಜಿನ ಪರಿಸ್ಥಿತಿಯು ರೈಲು ಸೇವೆಗಳನ್ನು ಅಸ್ತವ್ಯಸ್ತಗೊಳಿಸಿದ್ದು, ಹಲವಾರು ರೈಲುಗಳ ಸಂಚಾರದ ಮೇಲೆ ಪರಿಣಾಮ ಬೀರಿದೆ. ಕಡಿಮೆ ಗೋಚರತೆಯ ಪರಿಸ್ಥಿತಿಯಿಂದಾಗಿ ದೆಹಲಿಗೆ ತೆರಳುವ ೭೦ ಕ್ಕೂ ಹೆಚ್ಚು ರೈಲುಗಳು ಎರಡು ಗಂಟೆಗಳ ಕಾಲ ತಡವಾಗಿದೆ. ಅನಾನುಕೂಲತೆ ಮತ್ತು ವಿಳಂಬ ತಪ್ಪಿಸಲು ಪ್ರಯಾಣಿಕರು ನಿಲ್ದಾಣವನ್ನು ತಲುಪುವ ಮೊದಲು ತಮ್ಮ ರೈಲುಗಳ ಇತ್ತೀಚಿನ ವೇಳಾಪಟ್ಟಿಯನ್ನು ಪರಿಶೀಲಿಸುವಂತೆ ಭಾರತೀಯ ರೈಲ್ವೆ ಇಲಾಖೆ ಸೂಚಿಸಿದೆ.

<><><>

ಮಲೇಷ್ಯಾ ಓಪನ್ ಸೂಪರ್ ೧೦೦೦ ಬ್ಯಾಡ್ಮಿಂಟನ್ ಪಂದ್ಯಾವಳಿಯ ಎರಡನೇ ಸುತ್ತಿಗೆ ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಮುನ್ನಡೆದಿದ್ದಾರೆ. ಮಹಿಳಾ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಚೈನೀಸ್ ತೈಪೆಯ ಸಂಗ್ ಶುವೊ ಯುನ್ ವಿರುದ್ಧ ಪಿ.ವಿ.ಸಿಂಧು ನೇರ ಸೆಟ್‌ಗಳಿಂದ ಜಯ ಸಾಧಿಸಿದರು. ಎಂಟನೇ ಶ್ರೇಯಾಂಕದ ಸಿಂಧು ಮುಂದಿನ ಸುತ್ತಿನಲ್ಲಿ ಜಪಾನ್‌ನ ಟೊಮೊಕಾ ಮಿಯಾಜಾಕಿಯನ್ನು ಎದುರಿಸಲಿದ್ದಾರೆ. ಕಳೆದ ವರ್ಷ ಪಾದದ ಗಾಯದಿಂದ ಚೇತರಿಸಿಕೊಂಡ ನಂತರ ಪಿ.ವಿ.ಸಿಂಧು ತಮ್ಮ ಮೊದಲ ಅಂತಾರಾಷ್ಟ್ರೀಯ ಪಂದ್ಯವನ್ನು ಆಡುತ್ತಿದ್ದಾರೆ.

<><><>

ಬ್ರಿಟಿಷ್ ಜೂನಿಯರ್ ಓಪನ್ ಸ್ಕ್ವಾಷ್ ಚಾಂಪಿಯನ್‌ಶಿಪ್‌ನಲ್ಲಿ ಅಗ್ರ ಶ್ರೇಯಾಂಕಿತ ಭಾರತದ ಅನಾಹತ್ ಸಿಂಗ್, ನಿನ್ನೆ ನಡೆದ ಸೆಮಿಫೈನಲ್‌ನಲ್ಲಿ ಈಜಿಪ್ಟ್‌ನ ಮಲಿಕಾ ಎಲ್ ಕರಾಕ್ಸಿ ವಿರುದ್ಧ

ನೇರ ಸೆಟ್‌ಗಳಿಂದ ಜಯ ಸಾಧಿಸುವ ಮೂಲಕ ತಮ್ಮ ಮೊದಲ ಮಹಿಳಾ ಅಂಡರ್-೧೯ ಫೈನಲ್‌ಗೆ ಮುನ್ನಡೆದರು. ೧೨ ಬಾರಿ ಪಿಎಸ್‌ಎ ಟೂರ್ ಪ್ರಶಸ್ತಿ ವಿಜೇತರಾಗಿರುವ ೧೭ ವರ್ಷದ ಅನಾಹತ್ ಸಿಂಗ್, ಇಂಗ್ಲೆಂಡ್‌ನ ಬರ್ಮಿಂಗ್ಹ್ಯಾಮ್ ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ಎಲ್ ಕರಾಕ್ಸಿ ಅವರನ್ನು ೧೧-೮, ೧೧-೭, ೧೧-೯ ಸೆಟ್‌ಗಳಿಂದ ಸೋಲಿಸಿದರು. ಫೈನಲ್‌ನಲ್ಲಿ ಅವರು ಯುರೋಪಿಯನ್ ಜೂನಿಯರ್ ಚಾಂಪಿಯನ್ ಮತ್ತು ಫ್ರಾನ್ಸ್‌ನ ಎರಡನೇ ಶ್ರೇಯಾಂಕಿತ ಲಾರೆನ್ ಬಾಲ್ಟಯನ್ ಅವರನ್ನು ಎದುರಿಸಲಿದ್ದಾರೆ. ೨೦೦೫ ರಲ್ಲಿ ಜೋಶ್ನಾ ಚಿನ್ನಪ್ಪ ನಂತರ ಅಂಡರ್-೧೯ ಪ್ರಶಸ್ತಿಯನ್ನು ಗೆದ್ದ ಎರಡನೇ ಭಾರತೀಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲು ಅನಾಹತ್ ಸಿಂಗ್ ತವಕಿತರಾಗಿದ್ದಾರೆ.

<><><><>

ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶದ ಮಾಲಿನ್ಯದ ಎಲ್ಲಾ ಪ್ರಮುಖ ಅಂಶಗಳನ್ನು ಎರಡು ವಾರಗಳಲ್ಲಿ ಗುರುತಿಸಿ, ಹಂತ-ಹಂತವಾಗಿ ಅವುಗಳನ್ನು ನಿಭಾಯಿಸಲು ದೀರ್ಘಾವಧಿಯ ವಲಯವಾರು ಕ್ರಿಯಾ ಯೋಜನೆಗಳನ್ನು ಸೂಚಿಸುವಂತೆ ಸುಪ್ರೀಂ ಕೋರ್ಟ್, ವಾಯು ಗುಣಮಟ್ಟ ನಿರ್ವಹಣಾ ಆಯೋಗ-ಸಿಎಕ್ಯುಎಂ ಗೆ ಸೂಚನೆ ನೀಡಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>